ದಿಃ 6.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಐ.ಎಮ್.ಹೆಚ್. ವಕೀಲರಿಂದ ,**

1. ಆರೋಪಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆತನಿಗೆ ಮಾಸಿಕ ರೂ. 35,000/- ವೇತನ ಇರುತ್ತದೆ. ಆರೋಪಿ ನನ್ನಿಂದ ಹಣ ಪಡೆಯುವ 10 ದಿನಗಳ ಮುಂಚಿತವಾಗಿ ನನ್ನ ಬಳಿ ಸಾಲ ಕೇಳಿದ್ದರು. ಉಂಬ್ಲೆಬೈಲು ಗ್ರಾಮದಲ್ಲಿ ಆರೋಪಿಗೆ ಒಂದು ಸ್ವಂತ ಮನೆ ಇರುತ್ತದೆ. ನಾನು ಆರೋಪಿಯ ಮನೆಗೆ ಹೋಗಿರುತ್ತೇನೆ, ಅದು ಆರ್.ಸಿ.ಸಿ. ಮನೆಯಾಗಿರುತ್ತದೆ. ಆರೋಪಿಯ ಮಕ್ಕಳು ಏನು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ ನನಗೆ ತಿಳಿದಿಲ್ಲ.

2. ನಾನು ಐ.ಟಿ.ಐ. ವ್ಯಾಸಾಂಗ ಮಾಡಿರುತ್ತೇನೆ. ನನಗೆ ಈಗ 34 ವರ್ಷ ವಯಸ್ಸು. ನಾನು ಚಾಲಕನಾಗಿದ್ದು ಟ್ರಾವೆಲ್ಸ ನಡೆಸುತ್ತಿರುತ್ತೇನೆ. ನನ್ನ ಬಳಿ 2 ಸ್ವಂತ ವಾಹನಗಳು ಇರುತ್ತವೆ. ನಾನು ಕಳೆದ 12 ವರ್ಷಗಳಿಂದ ಟ್ರಾವೆಲ್ಸ ವ್ಯವಹಾರ ಮಾಡುತ್ತಿರುತ್ತೇನೆ. ನಮ್ಮ ಮನೆಯಲ್ಲಿ 5 ಜನ ಇರುತ್ತೇವೆ. ನಮ್ಮ ಮನೆಯಲ್ಲಿ ನಾನು ಒಬ್ಬನೇ ದುಡಿಯುವವನು. ನಾನು ಹಣಕಾಸಿನ ವ್ಯವಹಾರ ಸಹ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ.

3. ಪೋಲೀಸ್ ಠಾಣೆಗೆ ಆರೋಪಿಯೇ ನನ್ನ ವಿರುದ್ಧ ದೂರನ್ನು ನೀಡಿದ್ದರು. ಆರೋಪಿಯ ಪತ್ನಿ ನನಗೆ ತಿಳಿದಿರುತ್ತಾರೆ. ಆಕೆ ಬಟ್ಟೆ ವ್ಯಾಪಾರ ಮಾಡುತ್ತಾರೆ. ಸಾಲ ಪಡೆಯಲು ಆರೋಪಿಯೊಂದಿಗೆ ಆಕೆಯ ಹೆಂಡತಿ ಸಹ ಬಂದಿದ್ದರು. ಆರೋಪಿಗೆ ನಾನು ರೂ. 7,50,000/- ಗಳನ್ನು ನಗದಾಗಿ ನೀಡಿರುತ್ತೇನೆ. ಸದರಿ ಹಣ ನನ್ನ ತಂದೆಯ ನಿವೃತ್ತಿಯ ಹಣ ಆಗಿತ್ತು, ಅದು ನಮ್ಮ ಮನೆಯಲ್ಲಿ ಇತ್ತು. ನನ್ನ ತಂದೆ ಈಗ ಮೃತ ಪಟ್ಟಿರುತ್ತಾರೆ. ನನ್ನ ತಂದೆ ಕೆ.ಇ.ಬಿ. ಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ವಯೋಸಹಜ ನಿವೃತ್ತಿ ಹೊಂದಿದ್ದರು. ನನ್ನ ತಂದೆ 7 – 8 ವರ್ಷಗಳ ಹಿಂದೆ ನಿವೃತ್ತಿ

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-1.pdf

ಹೊಂದಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಗೂ ಅವರ ನಿವೃತ್ತಿ ಸಂಬಂಧ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಗೆ ನಾವು 3 ಜನ ಮಕ್ಕಳು. ನನ್ನ ಬಳಿ ಆರೋಪಿಯ ಹೆಂಡತಿ ಸಾಲ ಪಡೆದಿದ್ದು ಆರೋಪಿ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ಹೆಂಡತಿಯ ನಡುವೆ ಮೊದಲಿನಿಂದಲೂ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ನನ್ನಿಂದ ಪಡೆದಿದ್ದ ಎಲ್ಲಾ ಸಾಲವನ್ನು ತೀರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಆದಾಯಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಸ್ವತ್ತುಗಳ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

4. ನಮ್ಮ ಕುಟುಂಬದಲ್ಲಿ ಈವರೆಗೆ ವಿಭಾಗ ಆಗಿಲ್ಲ. ನಮ್ಮ ಕುಟುಂಬದ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿರುತ್ತೇನೆ. ಟ್ರಾವೆಲ್ಸ ಉದ್ಯೋಗದೊಂದಿಗೆ ನಾನು ಎಲೆಕ್ಟ್ರಿಕಲ್ ವೈರಿಂಗ್ ಕೆಲಸಗಳನ್ನು ಮಾಡುತ್ತಿರುತ್ತೇನೆ. ನನಗೆ ವಾರ್ಷಿಕ ರೂ. 7- 8 ಲಕ್ಷ ಆದಾಯ ಇರುತ್ತದೆ. ಆ ಸಂಬಂಧ ದಾಖಲೆಗಳು ಇರುತ್ತವೆ. ನಿಪಿ - 1 ರಲ್ಲಿನ ಬರವಣಿಗೆ ನನ್ನದು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಆರೋಪಿ ಹೇಳಿದಂತೆ ಆತನ ಎದುರುಗಡೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ - 1 ಅನ್ನು ನಮ್ಮ ಮನೆಯಲ್ಲಿಯೇ ಬರೆದಿರುತ್ತೇನೆ. ಆರೋಪಿಯ ಹೆಂಡತಿ ನನ್ನ ವಿರುದ್ಧ ಶಿವಮೊಗ್ಗದ ತುಂಗಾನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ನಾನು ಆರೋಪಿಯ ಹೆಂಡತಿ ಬಳಿ ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿದ ಕಾರಣ ಆಕೆ ನನ್ನ ವಿರುದ್ದ ದೂರು ನೀಡಿರುತ್ತಾರೆ. ನಾನು ದಿಃ 25-11-2023 ರಲ್ಲಿ ಆಕೆಯ ಮನೆಗೆ ಹೋಗಿ ಹಣ ಕೇಳಿರುತ್ತೇನೆ. ಆ ಸಮಯ ಆರೋಪಿ ಮನೆಯಲ್ಲಿ ಇರಲಿಲ್ಲ. ಆರೋಪಿಯ ಹೆಂಡತಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು ಎಂದರೆ ಸರಿ. ಆ ಸಮಯ ಪೋಲೀಸರು ಆಕೆಯ ಹೇಳಿಕೆ ಪಡೆದುಕೊಂಡಿದ್ದರು ಎಂದರೆ ನನಗೆ

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-1.pdf

ತಿಳಿದಿಲ್ಲ. ಆ ಸಮಯ ನಾನು ಆಕೆಯನ್ನು ಪದೇ ಪದೇ ಪೀಡಿಸುತ್ತಿರುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ಆಕೆಯ ಬಳಿ ಹಣ ಕೇಳಿದ ಕಾರಣ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

5. ಆರೋಪಿಯ ಮಗ ಡಿಪ್ಲೊಮೋ ವ್ಯಾಸಾಂಗ ಮಾಡುತ್ತಿರುತ್ತಾರೆ. ಆತ ಯಾವ ಕಾಲೇಜಿನಲ್ಲಿ ವ್ಯಾಸಾಂಗ ಮಾಡುತ್ತಿರುತ್ತಾರೆ ನನಗೆ ತಿಳಿದಿಲ್ಲ. ಆರೋಪಿಯ ಮಗ ಕಳೆದ 5 – 6 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಆರೋಪಿಗೆ ಒಬ್ಬಳು ಮಗಳು ಇರುತ್ತಾರೆ ಎಂದರೆ ಸರಿ. ಆಕೆಯ ಮದುವೆ ಆಗಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಂದು ಕುಟುಂಬ ಮಾಸಿಕ ರೂ. 15 -16 ಸಾವಿರ ಹಣದಲ್ಲಿ ಜೀವನ ಸಾಗಿಸಬಹುದು ಎಂದರೆ ಸರಿ. ಆರೋಪಿಯ ಹೆಂಡತಿ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ.

6. ನಿ.ಪಿ. 4 ನೋಟೀಸು ನೀಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನೋಟೀಸಿನಲ್ಲಿ ತಿಳಿಸಿರುವಂತೆ ಕಂತುಗಳಲ್ಲಿ ಹಣ ಪಾವತಿಸುವಂತೆ ಪೋಲೀಸರು ನನ್ನ ಹಾಗೂ ಆರೋಪಿ ನಡುವೆ ಸಂದಾನ ಮಾಡಿದ್ದರು. ಆ ರೀತಿ ಎ.ಎಸ್.ಐ. ದೂದನಾಯ್ಕ ರವರು ಮಾತುಕತೆ ನಡೆಸಿದ್ದರು. ಸದರಿ ಮಾತುಕತೆ ಪೋಲೀಸ್ ಠಾಣೆಯಲ್ಲಿ ಆಗಿತ್ತು. ಆದರೆ ಆರೋಪಿ ಯಾವುದೇ ಕಂತಿನಲ್ಲಿ ಹಣ ಪಾವತಿಸಿಲ್ಲ, ಆ ಕಾರಣ ಒಟ್ಟಿಗೆ ಹಣ ಪಾವತಿಸುವುದಾಗಿ ನಿಪಿ - 1 ಚೆಕ್ಕನ್ನು ನೀಡಿರುತ್ತಾರೆ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-1.pdf

www.ecourtsindia.com